ಕೃಷ್ಣಪ್ರಜ್ಞೆಯ ರೂಪಕವಾಗಿ 'ಭಾಂಡೀರ ದರ್ಶನ'

ಶೋಭಾರಾಣಿ ಎನ್.*

DOI: https://doi.org/10.5281/zenodo.24337753

ABSTRACT

ಕನ್ನಡದಲ್ಲಿ ಮಹಾಕಾವ್ಯಗಳ ಬಹು ದೊಡ್ಡ ಪರಂಪರೆಯೇ ಇದೆ. ಇದು ಪ್ರಧಾನವಾಗಿ ಶಿಷ್ಟ ಮತ್ತು ಜನಪದ ಎರಡೂ ಧಾರೆಗಳಲ್ಲಿ ಹರಿದು ಬಂದಿದೆ. ಶಿಷ್ಟ ಪರಂಪರೆಯಲ್ಲಿ ಲಿಖಿತವಾಗಿ ಮತ್ತು ಜನಪದ ಪರಂಪರೆಯಲ್ಲಿ ಮೌಖಿಕವಾಗಿ ಅಂದಿನಿಂದ ಇಂದಿನವರೆಗೂ ಅವಿಚ್ಛಿನ್ನವಾಗಿ ಸಾಗಿ ಬರುತ್ತಿದೆ. ಪಂಪನಿಂದ ಷಡಕ್ಷರಿಯವರೆಗೆ, ಮುಂದುವರಿದು ಮುದ್ದಣ್ಣನವರೆಗೆ, ಮತ್ತೂ ಮುಂದುವರಿದು ಕುವೆಂಪು – ಗೋಕಾಕ್ – ಪುತಿನ ಮೊದಲಾದವರವರೆಗೂ ಮಹಾಕಾವ್ಯಗಳ ಹರಹಿದೆ. ಕವಿಯ ಮನೋಧರ್ಮ ಮತ್ತು ಪ್ರತಿಭೆಗಳು ಅವಿನಾಭಾವದಿಂದ ಸೇರಿದರೆ ಕಾಲ–ದೇಶಗಳ ನಿಯತ ನಿಯಮಗಳಾಚೆಗೂ ಮಹಾಕಾವ್ಯಗಳನ್ನು ಸೃಜಿಸಬಲ್ಲವು ಎಂಬುದಕ್ಕೆ ನಮ್ಮ ಆಧುನಿಕ ಕನ್ನಡ ಮಹಾಕಾವ್ಯಗಳು ಅತ್ಯುತ್ತಮ ನಿದರ್ಶನಗಳಾಗಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನ ಪುತಿನರವರ ''ಶ್ರೀಹರಿಚರಿತೆ'' ಮಹಾಕಾವ್ಯದ 'ಭಾಂಡೀರ ದರ್ಶನ' ಉಲ್ಲಾಸವನ್ನು ಅಭ್ಯಸಿಸುವ ಪ್ರಯತ್ನ ಮಾಡುತ್ತದೆ.

KEYWORDS: ಮಹಾಕಾವ್ಯಗಳು, ಪುತಿನರ ಶ್ರೀಹರಿಚರಿತೆ, ಭಾಂಡೀರ ದರ್ಶನ, ಕೃಷ್ಣಪ್ರಜ್ಞೆ, ಸಾಂಕೇತಿಕ ಕಾವ್ಯ, ನಾದಯೋಗ–ವೇಣುನಾದ.

* **ಡಾ. ಶೋಭಾರಾಣಿ ಎನ್.,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

"ಸಾಹಿತ್ಯದ ಬೇರೆ ಬೇರೆ ರೂಪಗಳನ್ನು ಖಚಿತವಾಗಿ ವರ್ಗೀಕರಿಸಿ ತೋರಿಸುವುದು ಸುಲಭದ ಕೆಲಸವಲ್ಲ, ಆದರೆ ಅವುಗಳಲ್ಲಿ ಮಹಾಕಾವ್ಯ ಎಂಬ ರೂಪವನ್ನು ಗುರುತಿಸಿ ತೋರಿಸುವುದು ಅಂತಹ ಕಷ್ಟದ ಕೆಲಸವೇನಲ್ಲ."[1] ಎನ್ನುತ್ತಾರೆ ಜಿ.ಎಸ್. ಶಿವರುದ್ರಪ್ಪನವರು. ಅಂದರೆ ಮಹಾಕಾವ್ಯಗಳನ್ನು ಇತರ ಕಾವ್ಯ ಪ್ರಕಾರಗಳಿಂದ ಬೇರ್ಪಡಿಸುವ ಅಂಶವೇ ಇಲ್ಲಿರುವ 'ಮಹತ್ತು'. ಇದು ಮಹಾಕಾವ್ಯದ ಗಾತ್ರ, ವಸ್ತುವಿಸ್ತಾರ, ಛಂದಸ್ಸು ಮತ್ತು ಸತ್ತ್ವಾತಿಶಯಗಳಲ್ಲಿ ಅಂತರ್ಗತವಾಗಿರುತ್ತದೆ. ಹೀಗೆ ಹೇಳುವಾಗ ಇಂದಿನ ಆಧುನಿಕ ಯುಗದಲ್ಲಿ ಮಹಾಕಾವ್ಯ ರಚನೆ ಸಾಧ್ಯವೇ? ಅನಿವಾರ್ಯವೇ? ಅಗತ್ಯವೇ? ಎಂಬಿತ್ಯಾದಿ ಪ್ರಶ್ನೆಗಳೇಳುತ್ತವೆ. ಈ ಕುರಿತು ಸಾಕಷ್ಟು ಚರ್ಚೆಗಳೂ ನಡೆದಿವೆ ಮತ್ತು ಈ ಚರ್ಚೆಗಳು ಸಮಾಧಾನಕರ ಉತ್ತರಗಳನ್ನೂ ನೀಡುತ್ತಿವೆ. 'ಮಹಾಕಾವ್ಯದ ರಚನೆ, ಅದರ ವಸ್ತು, ಶೈಲಿ, ದೃಷ್ಟಿ ಏನೇ ಇರಲಿ, ಅವಶ್ಯಕವಾದ ಮನೋಧರ್ಮ ಮತ್ತು ಪ್ರತಿಭೆಯುಳ್ಳವರು ಇಂದಿಗೂ ಅದನ್ನು ಬರೆಯಬಲ್ಲರು, ಬರೆಯುತ್ತಾರೆ.'[2] ಎಂಬ ರಂ.ಶ್ರೀ. ಮುಗಳಿಯವರ ಮಾತು ಮಹಾಕಾವ್ಯಗಳ ರಚನೆಯ ಪ್ರಸ್ತುತತೆಯನ್ನು ತಿಳಿಸುತ್ತದೆ.

ಪುತಿನ ಅವರ "ಶ್ರೀಹರಿಚರಿತೆ"ಯು ಆಧುನಿಕ ಕನ್ನಡ ಮಹಾಕಾವ್ಯಗಳಲ್ಲಿ ಒಂದು. ಕಾವ್ಯವನ್ನು ನವನವೋನ್ಮೇಷವಾಗಿಸುವ 'ರಸಪ್ರಜ್ಞೆ' ಮತ್ತು ಅನಂತ ಅರಿವಿನ ಜಾಗರ ಸ್ಥಿತಿಯನ್ನು ನೀಡುವ 'ಕೃಷ್ಣಪ್ರಜ್ಞೆ'ಗಳು ಹದವಾಗಿ ಮಿಳಿತಗೊಂಡ ಅನನ್ಯ ಕೃತಿ. 'ಪ್ರಣಾಮಂ'ನಿಂದ 'ನಿವೇದನಂ'ವರೆಗೆ ಒಟ್ಟು ಮೂವತ್ತಮೂರು ಉಲ್ಲಾಸ (ಅಧ್ಯಾಯ) ಗಳಲ್ಲಿ ಹರಡಿಕೊಂಡಿರುವ, ಭಾಗವತ ಪರಂಪರೆಯ, ಕರ್ಮಯೋಗದ ಸಾರವನ್ನು ಸರ್ವಜನವೇದ್ಯವಾಗುವಂತೆ ನಿರೂಪಿಸಿರುವ ಕೃತಿ "ಶ್ರೀಹರಿಚರಿತೆ".

ಕವಿಯೇ ಹೇಳುವಂತೆ ಇದು ವ್ಯಷ್ಟಿ ಮತ್ತು ಸಮಷ್ಟಿಗಳ ಸುಂದರ ಸಾಮರಸ್ಯ. ಕಾವ್ಯವೊಂದು ಯಾಕಾಗಿ ಮತ್ತು ಹೇಗೆ ಹುಟ್ಟುತ್ತದೆ? ಪುತಿನ ಅವರೇ ಹೇಳುವಂತೆ "ಒಂದು ಚೇತನದಲ್ಲಿ ಭವದ ಧರ್ಮಾರ್ಥ ಕಾಮ ಸಂಬದ್ಧವಾದ ಆಕರ್ಷಣೆಗೂ ಮುಕ್ತಿಯ ವಿಕರ್ಷಣೆಗೂ ಉಂಟಾಗುವ ಘರ್ಷಣೆಯಿಂದ ಕಾವ್ಯ ಹುಟ್ಟುತ್ತದೆ, ಕಲೆ ಉದಿಸುತ್ತದೆ. (ಇದನ್ನು ಘರ್ಷಣೆ ಎಂದು ಕರೆಯುವುದಕ್ಕಿಂತ ವಿರುದ್ಧ ಶಕ್ತಿಗಳ ಸತತ ಸಹಚರ್ಯವೆಂದರೆ ಮೇಲೇನೋ)"[3] ಆದರೆ ಇದು ಘಟಿಸಲು ಕವಿಚೇತನಕ್ಕೆ ಭವನಿಮಜ್ಜನಚಾತುರ್ಯ ಮತ್ತು ಲಘಿಮಾಕೌಶಲಗಳು ಅಗತ್ಯ ಮತ್ತು ಅನಿವಾರ್ಯ. ಅಂದರೆ ಕಾವ್ಯದ ಹುಟ್ಟಿಗೆ ಭವದ ಸೆಳೆತ ಕಾರಣವಾದರೆ ಕಾವ್ಯಾನಂದ ಪ್ರಾಪ್ತಿಗೆ ಭವೋದ್ವೇಗ ಪ್ರಶಮನ ಕಾರಣವಾಗುತ್ತದೆ. ಈ ಹಂತದಲ್ಲಿ ಕಾವ್ಯ ಭೂಮಿ ಮತ್ತು ಆಕಾಶ ತತ್ತ್ವಗಳ ಸಂಸರ್ಗ ಸಾಧಿಸುತ್ತದೆ. ನೆಲ–ಮುಗಿಲುಗಳ ಸಂಯೋಗದ ಉತ್ಕೃಷ್ಟ ಪ್ರತೀಕವೇ ಕೃಷ್ಣ. ಇಲ್ಲಿನ ಕೃಷ್ಣ ಭವದ ಪ್ರೇಮ ಮತ್ತು ಆಧ್ಯಾತ್ಮದ ಆನಂದ ಎರಡನ್ನೂ ಮೇಳೈಸಿಕೊಂಡ ವ್ಯಕ್ತಿತ್ವದ ರೂಪಕ. "ಶ್ರೀಹರಿಚರಿತೆ" ಈ ಕೃಷ್ಣಪ್ರಜ್ಞೆಯನ್ನು ಪಡೆಯಲು ಕವಿಯೊಬ್ಬ ನೀಡಿರುವ ದಾರಿನಕ್ಷೆ.

ಮನುಷ್ಯನ ಆದಿಮ ಅಭೀಪ್ಸೆ ಆನಂದವನ್ನು ಪಡೆಯುವುದು. ಬದುಕನ್ನು

ಸಹನೀಯಗೊಳಿಸಿಕೊಳ್ಳುತ್ತಾ, ತಾನೂ ಬದುಕಿ ಇತರರಿಗೂ ಬದುಕಲು ಅನುವು ಮಾಡಿಕೊಟ್ಟು ಸಂತಸವನ್ನು ಪಡೆಯುವುದು ಆತನ ಉದ್ದೇಶ. ಆದರೆ ಜಗತ್ತಿನಲ್ಲಿ ಸಂತೋಷವನ್ನು ಪಡೆಯುವುದು ಸುಲಭವಲ್ಲ ಅಲ್ಲವೇ? "ಶ್ರೀಹರಿಚರಿತೆ"ಯಲ್ಲಿ ಇದಕ್ಕೆ ಕಂಡರಿಸಿರುವ ಮಾರ್ಗವೇ 'ಭಾಂಡೀರ ದರ್ಶನ'. ಇಲ್ಲಿ ಆಲವೆಂದರೆ ಕೇವಲ ಒಂದು ಬೃಹತ್ತಾದ ಮರವಲ್ಲ, ಇಲ್ಲಿನ ಕೊಳಲು ಕೇವಲ ಒಂದು ವಾದ್ಯವಲ್ಲ; ಭಾಂಡೀರ ವೃಕ್ಷ ಇಡೀ ವಿಶ್ವದ ಮನೋಭೂಮಿಕೆ. ಇದನ್ನು ದರ್ಶಿಸಿದ ಯಾರೂ ಮತ್ತೆ ದುಃಖದ ಮಡುವಿನಲ್ಲಿ ಬೀಳಲಾರರು. ಇದನ್ನು ಕಾಣಲು ಇರುವ ಸಾಧನವೇ ಒಳಗಿನ ತಿಳಿವು – ಅಂತರಂಗದ ಅರಿವು. ಹೀಗೆ ಅರ್ಥೈಸಿಕೊಳ್ಳುತ್ತಾ ಸಾಗಿದರೆ ಪುತಿನ ಅವರ ಇಡೀ 'ಶ್ರೀಹರಿಚರಿತೆ' ಮಹಾಕಾವ್ಯ ಒಂದು ಅಲಿಗರಿಯಂತೆ (ಸಾಂಕೇತಿಕ ಕಾವ್ಯ) ಕಾಣುತ್ತದೆ. ಈ ಕಾವ್ಯದ ಹತ್ತನೆಯ ಉಲ್ಲಾಸವಾದ "ಭಾಂಡೀರ ದರ್ಶನ" ಭಾಗವಂತೂ ಸುಂದರವಾದ ಅನ್ಯೋಕ್ತಿಯಾಗಿದೆ. ಇಲ್ಲಿರುವುದು ಭಾಂಡೀರವೆಂಬ ಪ್ರಕೃತಿ ಮತ್ತು ವೇಣುವೆಂಬ ಪುರುಷನ ಮಧುರ ಸಾಂಗತ್ಯ; ನಾದಯೋಗದ ದಿವ್ಯ ಸಖ್ಯ; ಓದುಗ–ಕೇಳುಗರಿಗಂತೂ ಇದು ಬೇಂದ್ರೆಯವರು ಹೇಳುವ "ಓಂಕಾರ ಶಂಖನಾದಕಿಂತ ಕಿಂಚಿದೂನ" ಎಂಬಂಥ ಅನುಭವ.

ಪ್ರಶ್ನಿಸುವುದೇ ಸತ್ಯಶೋಧನೆಯ ಮೊದಲ ಹೆಜ್ಜೆ. ಪ್ರಸ್ತುತ ಉಲ್ಲಾಸ ಪ್ರಾರಂಭವಾಗುವುದೂ ಪ್ರಶ್ನೆಗಳಿಂದ. ಮಹಾವೃಕ್ಷ ಭಾಂಡೀರಕ್ಕೆ ಆಶ್ರಯವಾಗಿರುವ ಬೃಂದಾವನವಾದರೂ ಎಲ್ಲಿದೆ? ಮಧುರೆಯ ಸನಿಹದಲ್ಲೇ? ಯಮುನೆಯ ತಡಿಯಲ್ಲೇ? ಕೃಪಣಶೋಷಣ ಪೋಷಣೆಯಲ್ಲೇ? ಜೀವ ಹಿಡಿದು ಉಸಿರೆಳೆಯುತ್ತ ಮಲಗಿರುವ ಬೃಂದಾವನ ಎನ್ನಲಾಗುವ ಈ ಭೌಗೋಳಿಕ ಸ್ಥಳ ಶ್ರೀಹರಿಯ ಆನಂದ ಭೂಮಿಯಲ್ಲ, ಸಮತೆಯ ನಾಡಲ್ಲ. ಎಲ್ಲಿ ಕ್ಷುದ್ರತೆ, ದುರ್ಬಲತೆ, ಕೃಪಣತೆಗಳಿರುತ್ತವೆಯೋ, ಎಲ್ಲಿ ತನ್ನ ಜನ–ನಾಡು–ನುಡಿ–ಸಂಸ್ಕೃತಿಗಳ ಬಗೆಗೆ ಅಭಿಮಾನ–ಗೌರವಗಳಿರುವುದಿಲ್ಲವೋ ಅಂತಹ ಜಡಭೂಮಿಯಲ್ಲಿ ಬೃಂದಾವನವಿಲ್ಲ. ಹಾಗಾದರೆ ಬೃಂದಾವನವೆಂಬುದು ಮತ್ತೆಲ್ಲಿದೆ? ಮತ್ತೆಲ್ಲಿದೆ ಹೊಳೆಗಣ್ಣ ಗೋವಳ ಬಾಲಕರ ಆಡುಂಬೊಲ? ಸಂತೃಪ್ತ ಖಗಮೃಗಗಳ ಧ್ವನಿಗಳಿಂದ ತುಂಬಿದ ಸಮೃದ್ಧ ವನ? ಶ್ರೀಕೃಷ್ಣನ ಚರಣ ಸಂಚರಿಸಿದ ದಿವ್ಯಭೂಮಿ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಾವ್ಯದೊಳಗೇ ಅಂತರ್ಗತವಾಗಿದೆ. ಬೃಂದಾವನ ಎಂಬುದು ಇಲ್ಲಿ ಕೇವಲ ಭೌತಿಕ ಅಸ್ತಿತ್ವವಲ್ಲ. ಅದು ಮನೋಗತವಾದುದು, ಮನೋಮಯವಾದುದು. ಇಲ್ಲಿ ಒಳಿತನ್ನು ಬಯಸುವ ಪ್ರತಿಯೊಂದು ಮನಸ್ಸೂ ಒಂದು ಬೃಂದಾವನ. ಎಲ್ಲಿ ಒಲುಮೆ ಇರುವುದೋ, ಎಲ್ಲಿ ಗೆಳೆತನ–ಪ್ರೇಮ ಇರುವುದೋ, ಎಲ್ಲಿ ಕರುಬಿಲ್ಲದ ಅಕ್ಕರೆ ಇರುವುದೋ, ಎಲ್ಲಿ ನಿರ್ಭಯತೆ ಇದೆಯೋ, ಎಲ್ಲಿ ಕೇಡನ್ನು ಗೆಲ್ಲಬಲ್ಲ ಛಲ–ಪೌರುಷಗಳಿವೆಯೋ, ಎಲ್ಲಿ ಸಕಲ–ಬಂಧನಗಳಿಂದ ಬಿಡುಗಡೆಯಿದೆಯೋ ಅಲ್ಲಿ ಬೃಂದಾವನವಿದೆ ಮತ್ತು ಅಲ್ಲೇ ಶ್ರೀಕೃಷ್ಣನ ದಿವ್ಯಗಾನ ನೆಲೆಸಿದೆ.

ಶ್ರೀಕೃಷ್ಣನ ಕೊಳಲು ನುಡಿಯುವುದು ಲೋಕೋದ್ಧಾರಕ್ಕಾಗಿ. ಸ್ನೇಹಕ್ಕೆ ಸೋಲುವ ಈತನನ್ನು ಧ್ಯಾನಿಸುವವರಿಗೆ ಅಖಂಡ ಭಾಗ್ಯವಿದ್ದರೆ ಆ ದ್ವಾಪರದ

ಮುರಳಿಯ ಲೀಲೆಗಳು ಇಂದಿಗೂ ಅನುಭವಕ್ಕೆ ಬರುತ್ತವೆ. ಕೃಷ್ಣನ ಜೊತೆಗಾಡುವ, ಓಡುವ, ಬಳಲುವ–ಬಳಲಿಸುವ ಗೆಳೆಯರ ಧ್ವನಿ ಕಿವಿಗಳಿಗೆ ಕೇಳುತ್ತದೆ. ಆತನನ್ನು ಸೇವಿಸುವ/ಉಪಚರಿಸುವ/ಸೇವೆಗೈವ ಪರಿ ತಿಳಿಯುತ್ತದೆ. ಆ ಮಹಾಪುರುಷನ ಸಂಯೋಗ ಸುಖ ಉಂಟಾಗುತ್ತದೆ. ಈ ಸಂಯೋಗದಲ್ಲಿ ಜೀವ ಮತ್ತು ದೇವರ ಕೊಟ್ಟುಕೊಳ್ಳುವ ವ್ಯವಹಾರವಿಲ್ಲ. ಒಡೆಯ–ದಾಸರೆಂಬ ಭೇದವಿಲ್ಲ–ಖೇದವಿಲ್ಲ. ಈ ಸಂಯೋಗದಲ್ಲಿರುವುದೆಲ್ಲ ಕೇವಲ ಬಿಡುಗಡೆಯ ಸ್ವಾದಿಷ್ಟ ಫಲ. ಬಂಧನ ಎನ್ನುವುದು ಜೀವಿಗಳಿಗೆ ಒದಗುವ ಬಹು ದೊಡ್ಡ ಸಂಕಟವಾದರೆ ಅವುಗಳಿಂದ ಬಿಡುಗಡೆ ಪಡೆಯುವುದು ಮುಕ್ತಿಯ ಕ್ಷಣ. ಈ ಅನಂತ ಸುಖದ ಕ್ಷಣಗಳು ಅಪ್ರಾರ್ಥಿತವಾಗಿಯೇ ಆ ತುರುಗಾಹಿ ಗೆಳೆಯರಿಗೆ ಲಭಿಸಿವೆ. ಲೋಕಬಂಧನದಿಂದ ಬಿಡುಗಡೆ ಪಡೆದ ಆ ಅನಂತ ಕ್ಷಣದಲ್ಲಿ ಕಾಲ ಸ್ತಬ್ಧವಾಗಿಬಿಡುತ್ತದೆ. ಹರಿ ತನ್ನ ಗೆಳೆಯರ ಜೊತೆಗೆ ನಿಸರ್ಗದ ವ್ಯಾಪಾರವನ್ನು ಮಾರ್ಪೊಳಿಸುತ್ತಾನೆ/ಪ್ರತಿಬಿಂಬಿಸುತ್ತಾನೆ. ಅವನ ವೇಣುವಿನಿಂದ ಹೊರಟ ನಾದ ಹೊಸ ರಾಗಗಳನ್ನು ಸೃಜಿಸುತ್ತಾ ಮೋಹಕ ಪರಿಸರವನ್ನು ನಿರ್ಮಿಸುತ್ತದೆ. ನುಡಿಸಿದ ಹರಿಯ ತುಟಿಗಳಲ್ಲಿ ಅಳಿಸಲಾಗದ ಮಂದಹಾಸ ಮೆರೆಯುತ್ತದೆ.

ವೇಣುನಾದ ಸಾಕೆನಿಸಿದರೆ ಸೋರೆವೀಣೆ, ಕೊಂಬು, ಕಹಳೆ, ಶಂಖಗಳನ್ನು ನುಡಿಸುತ್ತಾನೆ. ಅದರಿಂದ ಹೊರಟ ಸುವರ್ಣ ಧ್ವಾನ ಮಲೆ–ಕಣಿವೆ, ಕಾಂತಾರ–ಗಹ್ವರಗಳನ್ನು ತುಂಬಿಬಿಡುತ್ತದೆ. ಎಷ್ಟೆಂದರೆ ತಪವಿರುವ ಮುನಿಗಳನ್ನೂ ಎಚ್ಚರಿಸುವಷ್ಟು. ಇದು ಸಂಗೀತಕ್ಕಿರುವ ಶಕ್ತಿ. ಹಾಗೆ ನೋಡಿದರೆ ಇಡೀ ವಿಶ್ವವೇ ನಾದಮಯವಾಗಿದೆ. ಗ್ರಹ–ತಾರೆಗಳ ಪರಿಭ್ರಮಣವು ಆಗಸದ ಶೂನ್ಯದಲ್ಲೂ ನಾದವನ್ನು ಹರಡುತ್ತದೆ. ನದಿ–ಹಳ್ಳ, ಗಾಳಿ–ಸಮುದ್ರ, ಮರಗಳ ಮರ್ಮರ ಪ್ರತಿಯೊಂದರ ಚಲನೆಯಲ್ಲೂ ನಾದವಿದೆ. ಶಬ್ದವೆಂಬುದು ಅವಿನಾಶಿಯಾದುದು. ಒಮ್ಮೆ ಹುಟ್ಟಿದ ಶಬ್ದ ನಿರಂತರ ಚಲನೆಯಲ್ಲಿರುತ್ತದೆ. ಹಾಗಾಗಿಯೇ ಅವಿನಾಶಿ ವಿಶ್ವಶಕ್ತಿಯನ್ನು ನಾದಮಯ ಎನ್ನಲಾಗುತ್ತದೆ, ಸಂಗೀತದಿಂದ ಆರಾಧಿಸಲಾಗುತ್ತದೆ.

ಹೀಗೆ ಈ ಕಾವ್ಯಭಾಗದಲ್ಲಿ ಕೃಷ್ಣನ ನಾದಾನುಸಂಧಾನ ಮತ್ತೂ ಮುಂದುವರಿದು ಯಜ್ಞತತ್ತ್ವ ಮತ್ತು ಕರ್ಮಯೋಗ ದೃಷ್ಟಿಯಲ್ಲಿ ಸಮಾಪ್ತಗೊಳ್ಳುತ್ತದೆ. ಯಜ್ಞವೆಂದರೇನು? ''ತನ್ನೊಳ ಉಸಿರೆ ಅದರೊಳು ಹಾಯ್ದು ಕಿವಿಗಳಿಂದೊಳಸರಿದು ಮರಳಿ ತವರನೆ ಸೇರೆ ಕೊಟ್ಟುದನೆ ಕೊಂಬಚ್ಚರಿ''.[4] ತನ್ನ ಉಸಿರಿನ ಮೂಲವಾದ ಲೋಕಕ್ಕೆ ಅದೇ ಉಸಿರನ್ನು ನಾದವಾಗಿ ಮಾರ್ಪಡಿಸಿ, ಮರಳಿ ನೀಡುವ ಕ್ರಿಯೆ. ಪಡೆದದ್ದನ್ನು ಕೊಟ್ಟದ್ದಕ್ಕೇ ಮರಳಿ ಅರ್ಪಿಸುವ ಕ್ರಿಯೆಯೇ ಯಜ್ಞ. ತನಗೆ ದೊರೆತದ್ದರ ಫಲವನ್ನು/ತನ್ನ ಕಾರ್ಯದ ಫಸಲನ್ನು ಇತರರಿಗೂ ಹಂಚುವುದು ಕರ್ಮಯೋಗ. 'ಭಾಂಡೀರ ದರ್ಶನ'ದ ತುಂಬ ಅನುರಣಿಸುತ್ತಿರುವುದು ನಾದಾತ್ಮಕವಾದ ಯಜ್ಞ ಮತ್ತು ಕರ್ಮಯೋಗಗಳು ಎಂದರೆ ಅತಿಶಯೋಕ್ತಿಯಲ್ಲ.

ಈ ನಾದೋತ್ಪತ್ತಿಯ ಕ್ರಿಯೆಯಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ

ಅಂಶ– "ಶುದ್ಧಿಯ ಬಿಡದೆ ಪರಿಪಾಲಿಸುತ್ತ ರಾಗಗಳ ಸೃಜಿಸುವ"[5] ಕ್ರಿಯೆ. ಪ್ರಕೃತಿಯಲ್ಲಿರುವ ವೈವಿಧ್ಯಮಯ ಶಬ್ದಗಳೇ ಸಂಗೀತಕ್ಕೆ ಪ್ರೇರಣೆ. ಇವುಗಳನ್ನು ಯಾರು ಬೇಕಾದರೂ ಅನುಸರಿಸಬಹುದು. ವಾದ್ಯಗಳನ್ನು ನುಡಿಸುವ ಕಲೆಗಾರಿಕೆಯನ್ನು ಕಲಿತು ಜಾಣ್ಮೆಯಿಂದ ನುಡಿಸಲೂಬಹುದು. ಆದರೆ ಪರಮಾನಂದ ಪ್ರಾಪ್ತಿಗೆ ಕೇವಲ ಸ್ವರಗಳ ರಾಗಬದ್ಧ ಹೊರಡಿಸುವಿಕೆಯೊಂದೇ ಆಧಾರವಲ್ಲ. ಸಂಗೀತ ನಾದವಾಗಬೇಕು. ನಾದವಾಗಬೇಕಾದರೆ ಚಿಂತನೆಗಳನ್ನು ನಾದಬೇಕು ಮತ್ತು ಅವು ಮಾಗಬೇಕು. ಇದಕ್ಕೆ ಮನಸ್ಸಿನ ಶುದ್ಧತೆಯನ್ನು ಬಿಡದಿರಬೇಕು. ಯಾರು ಪರಿಶುದ್ಧರೋ ಅವರು ಬಾನಿನ ಅನಂತತೆಯನ್ನೂ ನೆಲದ ಸೊಗಡನ್ನೂ ಏಕಕಾಲಕ್ಕೆ ಹಿಡಿಯಬಲ್ಲವರಾಗಿರುತ್ತಾರೆ. ಅವರು ಕೃಷ್ಣನಂತೆ ನಾದಯೋಗದ ಪರಿಕರ್ಮಿಗಳಾಗುತ್ತಾರೆ. ಇದರಿಂದ ದತ್ತವಾದ ಅಂತಃಕರಣ ಸಂಸ್ಕರಣದಿಂದ ಹಳೆಯದು ಹೊಸದೆನಿಸುವಂತೆ, ಪರಿಚಿತವಾದುದು ನವನವವೆನಿಸುವಂತೆ ವೇಣುನಾದ ಬೃಂದಾವನವನ್ನು ತುಂಬುತ್ತದೆ. ಹೆಸರಿರದ ನೂರು ಇಂಚರದ ಮೇಳವನ್ನು ನಿಸರ್ಗದ ಚರಾಚರದಿಂದ ಆರಿಸಿ ತಂದು ಕವಿಯಲ್ಲಿ ಸುರಿದು ಅಂತಃಕರಣದಲ್ಲಿ ಬೆರೆಸಿ ನಾದವನ್ನು ಆತ್ಮದ್ರವ್ಯವಾಗಿಸುತ್ತ ಪ್ರೇಮ ಭಂಡಾರದಲ್ಲಿ ನೆಲೆಗೊಳಿಸುತ್ತದೆ. ಉಚ್ಛ್ವಾಸ ರೂಪದಲ್ಲಿ ಒಳಗೆ ನೆಲೆಗೊಳಿಸಿಕೊಂಡ ಆನಂದವನ್ನು ಮರಳಿ ನಿಶ್ವಾಸ ರೂಪದಲ್ಲಿ ಕೊಳಲ ರಂಧ್ರಗಳ ಮೂಲಕ ಅತಿಥೇಯ ಅಂತಃಕರಣದಿಂದ ಬಾಹ್ಯಕ್ಕೂ ಪಸರಿಸಿ ಕೃತಾರ್ಥನಾಗುತ್ತಾನೆ ಇಲ್ಲಿನ ಕೃಷ್ಣ. ತನ್ನ ದಿವ್ಯ ಮೂಲಸ್ಥಾನವನ್ನು ತನಗೆ ಕೊಡುತ್ತಿರುವ ವೇಣುವನ್ನು ಪ್ರೀತಿಯಿಂದ ತುಟಿಗಿಟ್ಟುಕೊಳ್ಳುತ್ತಾನೆ. ಕೃಷ್ಣ ಮತ್ತು ವೇಣುವಿನ ಮಧುರ ಸಾಂಗತ್ಯ ಬೃಂದಾವನದ ಹಸಿರಿನಲ್ಲಿ ದಿವ್ಯಾನಂದದ ಪ್ರಭಾವಲಯವನ್ನು ನಿರ್ಮಿಸಿಬಿಡುತ್ತದೆ.

ಈ ಉಲ್ಲಾಸದಲ್ಲಿ ನಮ್ಮನ್ನು ಚಿಂತನೆಗೆ ತೊಡಗಿಸುವ ಮತ್ತಷ್ಟು ವಿಚಾರಗಳೆಂದರೆ ಬಾಲ್ಯ, ಕಲೆ ಮತ್ತು ಏಕಾಂತ. ಬಾಲ್ಯವೆಂದರೆ ಎಳೆತನವಲ್ಲ, ಎಲ್ಲ ಪ್ರಾಪಂಚಿಕ ವ್ಯವಹಾರಗಳನ್ನೂ ಪೂರ್ವಗ್ರಹ ವಿಮುಕ್ತವಾಗಿ, ಶುದ್ಧಾತ್ಮರಾಗಿ ನೋಡಲು ಸಾಧ್ಯವಿರುವ ಮಹತ್ವದ ಕಾಲ. ಇದು ಎಲ್ಲರೆದೆಯ ಅಕ್ಕರೆಯ ತಾಣ. ಈ ತಾಣದಲ್ಲಿ ನೆಲೆಸಬೇಕಾದರೆ ಆನಂದವನ್ನು ಪಡೆಯುವ/ಗಳಿಸುವ ಸಾಮರ್ಥ್ಯವನ್ನು ಬಲಿಯಿಸಿಕೊಳ್ಳಬೇಕು. ಕೃಷ್ಣನಿಗೂ ಇದು ಹೊರತಲ್ಲ. ಅವನೂ ಮನುಷ್ಯನೇ. ಸಾಮರ್ಥ್ಯವನ್ನು ಸ್ವಪ್ರಯತ್ನದಿಂದಲೇ ಪಡೆಯಬೇಕಲ್ಲವೇ? ಮನೋಮಯವಾದ ಆನಂದವನ್ನು ಪಡೆಯಲು ಸಂತೆಯೊಳಗಿನ ಶಬ್ದಕ್ಕಿಂತ ನೀರವ ಏಕಾಂತ ಹೆಚ್ಚು ಪರಿಣಾಮಕಾರಿ. ಈ ಏಕಾಂತವಾದರೂ ಎಂತಹದು? ಒಂಟಿತನವಲ್ಲ! ಜೀವ ತನ್ನನ್ನು ತಾನು ಅರಿಯಲು ಒಳಗಣ್ಣು ತೆರೆದುಕೊಳ್ಳಲು ಇರುವ ಅವಕಾಶ. ಹಾಗಾಗಿ ಇಲ್ಲಿನ ಕೃಷ್ಣ ಏಕಾಂತವನ್ನರಸಿ ಗೆಳೆಯರಿಂದ ತಪ್ಪಿಸಿ ವನಾಂತರ್ಗಾಮಿಯಾಗುತ್ತಾನೆ. ಆಗ ಅವನಿಗೆ ಕಾಣುತ್ತದೆ ಒಂದು ಪೇರಾಲ! ಇಲ್ಲಿಂದ ಮುಂದೆ ಸುಮಾರು 50 ಸಾಲುಗಳಲ್ಲಿ ಕವಿ ಭಾಂಡೀರದ ಮಹತ್ವ, ಬೃಹತ್ತುಗಳ ವರ್ಣನೆ ಮಾಡಿದ್ದಾರೆ.

ಬಾನೇ ತನ್ನ ಆಕಾರದಲ್ಲಿ ತನಗೊಂದು ಎಲೆಮಾಡವನ್ನು ನಿರ್ಮಿಸಿಕೊಂಡಷ್ಟು

ವಿಶಾಲವಾದ ಪೇರಾಲವನ್ನು ಎಷ್ಟು ನೋಡಿದರೂ ತಣಿಯದು ಕೃಷ್ಣನ ಮನಸ್ಸು. ತನ್ನ ಸ್ವಸಾಮರ್ಥ್ಯದಿಂದ, ತನ್ನ ಪ್ರಯತ್ನದಿಂದಲೇ ಮುಗಿಲೆತ್ತರ ಬೆಳೆದ ಆಲದ ಮಹತ್ ಸತ್ತ್ವ ಎಂತಹದು! ತಾನು ಬೆಳೆದದ್ದೇ ಅಲ್ಲದೆ ತನ್ನ ಬಿಳಲುಗಳಿಗೂ ತಾಯೊಲುಮೆ ನೀಡುತ್ತಾ, ತನ್ನಡಿಯಲ್ಲೇ ಆಶ್ರಯ ನೀಡುವ ಕೃತಕೃತ್ಯತೆಯ ಆನಂದದಲ್ಲಿ ಕೃಷ್ಣಪ್ರಜ್ಞೆ ಇದೆ. ಕೇವಲ ತಾಯ ಮಮತೆ ನೀಡುವುದರಲ್ಲೇ ಜಗನ್ನಿಯಾಮಕ ಪ್ರಜ್ಞೆ ವಿರಮಿಸುವುದಿಲ್ಲ. ಬದುಕೆಂಬುದು ನಿರಂತರ ಹೋರಾಟ, ಯುದ್ಧ ಭೂಮಿ. ಇಲ್ಲಿ ಉಳಿಯಬೇಕೆಂದರೆ ಗಟ್ಟಿತನವಿರಬೇಕು. ಈ ಗಟ್ಟಿತನವನ್ನು ಗಳಿಸುವಂತೆ ಒತ್ತಾಯಿಸಿ, ಪ್ರೇರೇಪಿಸಿ, ಎಳೆಯರೆಂಬ ಮರುಕವನ್ನೂ ತೋರದೆ ಲೋಕದ ಕುಲುಮೆಗೆ ದೂಡುತ್ತದೆ ಈ ಪ್ರಜ್ಞೆ. ಈ ಮಹಾಹವದಲ್ಲಿ ಗೆದ್ದವರು ಉಳಿಯುತ್ತಾರೆ, ಬೆಳೆಯುತ್ತಾರೆ. ಇಂತಹ ಕೃಷ್ಣಪ್ರಜ್ಞೆಯನ್ನು ಸಾಕಾರಗೊಳಿಸುವಂತೆ, ತಿರೆ–ನಭಗಳೆರಡನ್ನೂ ಹೀರಿ ಅಪ್ರತಿಮ ಜೀವೇಚ್ಛೆಯನ್ನು ಮೂರ್ತಿಕರಿಸುವಂತೆ ನಿಂತಿರುವ, ಮೋಡಗಳನ್ನು ಸೆಳೆದು ಬಿಸಿಲನ್ನು ತಡೆದು ತಣ್ಣನೆಯ ನೆರಳನ್ನು ನೀಡುತ್ತಿರುವ ಪೇರಾಲ ಭೌತಿಕ ಇರುವಿಕೆಯ ಜೊತೆಗೆ ಆಧ್ಯಾತ್ಮಿಕ ಅಸ್ತಿತ್ವವನ್ನೂ ಪಡೆದು ಮೆರೆಯುತ್ತಿದೆ. ಈ ಭಾಂಡೀರದಲ್ಲಿ ತಾಯಿಯ ಪ್ರೀತಿ, ಗುರುವಿನ ಕಾಠಿಣ್ಯ, ಸಂತನ ಔದಾಸೀನ್ಯ ಎಲ್ಲವೂ ಬೆರೆತಿದೆ.

ಇಲ್ಲಿ ಕವಿ ಕಾಣಿಸಿರುವ ಭಾಂಡೀರ ಎಲ್ಲ ಗೋವಳರ ಮಾತುಕತೆಗಳೊಳಗೂ ಬರುವ ಆದರೆ ಈವರೆಗೂ ಯಾರೂ ಕಂಡಿಲ್ಲದ ಮರ. ಅರಿವಿನ ಆಳಕ್ಕಿಳಿದವರಿಗೆ ಮಾತ್ರ ಮನೋಮಯಕೋಶದಲ್ಲಿ ಕಾಣುವಂಥದ್ದು. ಇದೊಂದು ಯೋಗ. ಇದನ್ನು ಕಂಡ ಯೋಗಿ ಶ್ರೀಕೃಷ್ಣ. ಒಮ್ಮೆ ಈ ಭಾಂಡೀರದ ಅಸ್ತಿತ್ವ ತಿಳಿವಿಗೆ ನಿಲುಕಿತೆಂದರೆ ಅಲ್ಲಿಂದಾಚೆಗೆ ಆ ಮನಸ್ಸು ಪ್ರಜ್ಞೆಯಲ್ಲಿ ನೆಲೆಗೊಳ್ಳುತ್ತದೆ. ಈ ಯೋಗ ರಹಸ್ಯವನ್ನು ಅರಿತ ಕೃಷ್ಣ ಅಲ್ಲಿ ನೆಲೆನಿಂತು ಕಾದಿದ್ದಾನೆ. ಇಲ್ಲಿ ಈತ ದೇವರಲ್ಲ, ಅವತಾರಿಯಲ್ಲ. ಈತ ಎಲ್ಲರ ಸಖ, ಕೆಡುಕಿಲ್ಲದ ಉನ್ನತ ಪ್ರಜ್ಞೆಯೇ ಈತ. ಆದರೆ ಬೃಂದಾವನದ ಭಾಂಡೀರ ವೃಕ್ಷದಲ್ಲಿ ಆ ಪ್ರಜ್ಞೆಯನ್ನು ಕಾಣುವ ಕಣ್ಣನ್ನು ನಾವು ಪಡೆಯಬೇಕಷ್ಟೇ! ಆ ಕಣ್ಣು ಮತ್ತು ಕಾಣ್ಕೆ ಎರಡೂ ದೊರೆತಾಗ ಬದುಕಿನಲ್ಲಿ ಕಾವಳ ಉಳಿಯಲಾರದು ಎಂಬುದು ಮಹಾಕವಿಯ ಮಹದಾಶಯ.

ಕೊನೆ ಟಿಪ್ಪಣಿಗಳು:

1. ಶಿವರುದ್ರಪ್ಪ ಜಿ.ಎಸ್., (1997), ಮಹಾಕಾವ್ಯ ಸ್ವರೂಪ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಪು.ಸಂ. 1
2. ಮುಗಳಿ ರಂ.ಶ್ರೀ., (1988), ಮಹಾಕೃತಿ, ಮೈಸೂರು: ಸಹ್ಯಾದ್ರಿ ಪ್ರಕಾಶನ, ಪು.ಸಂ. 11
3. ನರಸಿಂಹಾಚಾರ್ ಪು.ತಿ., (1999), ಕಾವ್ಯಕುತೂಹಲ, ಮೈಸೂರು: ಡಿ.ವಿ.ಕೆ.ಮೂರ್ತಿ, ಪು.ಸಂ. 9
4. ನರಸಿಂಹಾಚಾರ್ ಪು.ತಿ., (2014), ಶ್ರೀಹರಿಚರಿತೆ, ಬೆಂಗಳೂರು: ಪು.ತಿ.ನ. ಟ್ರಸ್ಟ್, ಪು.ಸಂ. 45
5. ಅದೇ, ಪು.ಸಂ. 45

ಪರಾಮರ್ಶನ ಗ್ರಂಥಗಳು:

1. ನರಸಿಂಹಾಚಾರ್ ಪು.ತಿ., (2014), ಶ್ರೀಹರಿಚರಿತೆ, ಬೆಂಗಳೂರು: ಪು.ತಿ.ನ. ಟ್ರಸ್ಟ್.
2. ಶಾಂತಕುಮಾರಿ ಎಲ್.ವಿ., (2016), ಶ್ರೀಹರಿಚರಿತೆ ಪು.ತಿ.ನ. ರಸದರ್ಶನ, ಬೆಂಗಳೂರು: ಪು.ತಿ.ನ. ಟ್ರಸ್ಟ್.
3. ನರಸಿಂಹಾಚಾರ್ ಪು.ತಿ., (1999), ಕಾವ್ಯಕುತೂಹಲ, ಮೈಸೂರು: ಡಿ.ವಿ.ಕೆ.ಮೂರ್ತಿ.
4. ಶಿವರುದ್ರಪ್ಪ ಜಿ.ಎಸ್., (1997), ಮಹಾಕಾವ್ಯ ಸ್ವರೂಪ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
5. ಮುಗಳಿ ರಂ.ಶ್ರೀ., (1988), ಮಹಾಕೃತಿ, ಮೈಸೂರು: ಸಹ್ಯಾದ್ರಿ ಪ್ರಕಾಶನ.